## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.892/2018**                    **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ದೊಡ್ಡೇಗೌಡ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 15-09-2025.** |

**ಮುಂದುವರೆದ  ಪಾಟೀ ಸವಾಲುಃ  ಶ್ರೀ ಸಿ ಎಸ್ ಎಂ   ವಕೀಲರಿಂದಃ**

ಸಾಕ್ಷಿಗೆ ನಿಪಿ-1ರಲ್ಲಿ ಸಹಿ ನನ್ನದೇ ಎಂದರೆ ಸರಿ.  ಮತ್ತು ಸದರಿ ಚೆಕ್ ನನ್ನದೇ ಆಗಿರುತ್ತದೆ. ನನ್ನ ಹೆಂಡತಿಯ ಹೆಸರು ಭಾಗ್ಯ ಇರುತ್ತದೆ.  ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ  ಎಸ್ ಸಿ 4/2022 ಬಸವರಾಜು ವಿರುದ್ಧ ಭಾಗ್ಯ ಎಂಬ ದಾವೆಯಲ್ಲಿ  ನನ್ನ ಹೆಂಡತಿ ಬಸವರಾಜುರವರಿಗೆ  ಆನ್ ಡಿಮಾಂಡ್ ಪ್ರನೋಟ್ ಅನ್ನು ಬರೆದುಕೊಟ್ಟಿರುತ್ತಾರೆ ಮತ್ತು ಅದು ಡಿಕ್ರಿ ಸಹ ಆಗಿರುತ್ತದೆ.  ನಾನು ಸದರಿ ಹಣವನ್ನು ಬ್ಯಾಂಕ್ ಮುಖಾಂತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮತ್ತು ಒ ಎಸ್ 146/2022 ರಲ್ಲಿ ನನ್ನ ಹೆಂಡತಿ  ಬಸವರಾಜುರವರಿಗೆ ಅಧಾರ್  ಪತ್ರ ಮಾಡಿರುತ್ತಾರೆ  ಮತ್ತು  ಸದರಿ ದಾವೆಯ ಅಂತಿಮ ಡಿಕ್ರಿ ಸಹ ಆಗಿರುತ್ತದೆ ಮತ್ತು ಜಪ್ತಿ ಕೂಡ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು  ಅಂತಿಮ ಡಿಕ್ರಿ ಆಗಿರುತ್ತದೆ  ಅದಾದ ಬಳಿಕ ನಾವು  ಮಿಸ್ ದಾವೆಯನ್ನು    ಹಾಕಿರುತ್ತೇವೆ ಎಂದು ನುಡಿಯುತ್ತಾರೆ.  ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ  ಮತ್ತು ನಾನು  ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**